ಸದಸ್ಯರು ಆದಿಚುಂಚನಗಿರಿ ನಾಲೆಯ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಸದರಿ ನಾಲೆಯ ಕಾಮಗಾರಿಗಳು ತೀವ್ರವಾಗಿ ಆಗುವಂತೆ ಸೂಚನೆಯನ್ನು ಕೊಡುತ್ತೇನೆ.

ಶ್ರೀ ಎನ್. ಚೆಲುವರಾಯ ಸ್ವಾಮಿ : ಸಣ್ಣ-ಪಟ್ಟ ಕೆಲಸಗಳನ್ನು ಮಾಡಿಸುವುದಕ್ಕೆ ಹಣ ಮಂಜೂರು ಆಗುತ್ತಿಲ್ಲವೆಂದು ಹೇಳುತ್ತಿದ್ದಾರೆ. ಆದ್ದರಿಂದ ಹಣ ಬಿಡುಗಡೆ ಯಾಗುವುದಕ್ಕೆ ತಮ್ಮಿಂದ ಸ್ಪಷ್ಟ ಆದೇಶ ಹೋಗಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಚ್.ಕೆ. ಪಾಟೀಲ್ : ಸಣ್ಣ-ಪುಟ್ಟ ಕೆಲಸಗಳಿಗೆ ಹಣ ಇಲ್ಲವೆಂದು ಹೇಳತಕ್ಕಂಥಾದ್ದು ಸರಿಯಲ್ಲ. ಮಾನ್ಯ ಸದಸ್ಯರಿಗೆ ಸರಿಯಾದ ಮಾಹಿತಿ ನೀಡದೆ, ಇವರನ್ನು ತಪ್ಪು ದಾರಿಗೆ ಎಳೆಯುತ್ತಿದ್ದಾರೆ. ಈ ವಿಷಯನ್ನು ನಿಮ್ಮ ಗಮನಕ್ಕೆ ತಂದಿರತಕ್ಕಂಥ ಯಾವ ಅಧಿಕಾರಿಯೇ ಆಗಿರಲಿ, ಆ ವಿಚಾರವನ್ನು ನನ್ನ ಗಮನಕ್ಕೆ ತರಬೇಕೆಂದು ಮಾನ್ಯ ಸದಸ್ಯರಲ್ಲಿ ಕೇಳಿಕೊಳ್ಳುತ್ತೇನೆ. ಸಣ್ಣ-ಪುಟ್ಟ ಕೆಲಸಗಳಿಗೆ ಮೊದಲು ಏನು ಮಾಡುತ್ತಿದ್ದರೆಂದರೆ, ಯಾವುದಾದರೂ ಒಂದು ಪದ್ಧತಿಯನ್ನು ಫಾಲೋ ಮಾಡಿದರೆ ಆ ಕೆಲಸವನ್ನು ತೆಗೆದು ಕೊಳ್ಳುತ್ತೇವೆಂದು ಹೇಳುತ್ತಿದ್ದರು. ಇದು ನಿಮ್ಮ ಗಮನಕ್ಕೂ ಕೂಡ ಬಂದಿರತಕ್ಕಂಥ ವಿಚಾರವಾಗಿದೆ. ಅಲ್ಲಿ ಸಾಕಷ್ಟು ಬೋಗಸ್ ಬಿಲ್‌ಗಳು ರಿಲೀಸ್ ಆಗಿದೆ, ಆದ್ದರಿಂದ ಇದನ್ನು ಚೆಕ್ ಮಾಡಬೇಕೆಂಬ ದೃಷ್ಟಿಯಿಂದ ಈ ಕೆಲಸವನ್ನು ಪ್ರೋಗ್ರಾಮ್‌ನಲ್ಲಿ ತೆಗೆದುಕೊಂಡಿರುವುದಿಲ್ಲ. ಯಾವಾಗ ಅಂದಾಜು ಪಟ್ಟಿಯನ್ನು ತಯಾರು ಮಾಡಿ ಪದ್ಧತಿ ಪ್ರಕಾರ ಕೆಲಸವನ್ನು ಮಾಡದೇ ಬೇರೆ ಕಡೆಗೆ ಹೋಗತಕ್ಕಂಥ ಸಂದರ್ಭದಲ್ಲಿ ಆದಕ್ಕೆ ಸ್ವಲ್ಪ ಲಗಾಮ್ ಹಾಕಿ ಹಿಡಿಯಲಾಗಿದೆ. ಸಣ್ಣ ಕೆಲಸ ಅಥವಾ ದೊಡ್ಡ ಕೆಲಸವೇ ಆಗಿರಲಿ, ತುರ್ತಾಗಿ ಆಗಬೇಕಾಗಿರತಕ್ಕಂಥ ಸಂದರ್ಭದಲ್ಲಿ ಸದರಿ ಕೆಲಸಗಳನ್ನು ತೆಗೆದುಕೊಳ್ಳುವುದಕ್ಕೆ ಏನು ಮಾಡಬೇಕೆಂಬುದರ ಬಗ್ಗೆ ಓ ಅಂಡ್ ಎಂ ವಿಚಾರದಲ್ಲಿ ಒಂದು ಸುಧೀರ್ಘವಾದ ಸೂಚನೆ ಮತ್ತು ಗೈಡ್‌ಲೈನ್ಸನ್ನು ನಾವು ಈಗಾಗಲೇ ನೀಡಲಾಗಿದೆ.

ಮಾಹಿತಿ ತಂತ್ರಜ್ಞಾನ ಅಭಿವೃದ್ಧಿಗಾಗಿ ಕೈಗೊಂಡಿರುವ ಕ್ರಮಗಳು

451 - ಶ್ರೀ ಎನ್. ಯೋಗೀಶ್ ಭಟ್ (ಮಂಗಳೂರು) : ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) *ರಾಜ್ಯದಲ್ಲಿ ಮಾಹಿತಿ ತಂತ್ರಜ್ಞಾನ ಅಭಿವೃದ್ಧಿಗೊಳಿಸಲು ಸರ್ಕಾರ ಕೈಗೊಂಡು ಕ್ರಮಗಳೇನು ?*

ಆ) *ರಾಜ್ಯದಲ್ಲಿ ಮೂಲಭೂತ ಸೌಕರ್ಯ Earth Station, Optic Fibre Cable ಇತ್ಯಾದಿಗಳನ್ನು ಯಾವ ಭಾಗಗಳಲ್ಲಿ ಅಭಿವೃದ್ಧಿ ಪಡಿಸಲು ಯೋಜನೆ ಹಾಕಲಾಗಿದೆ? ಹೂಡಲಿರುವ ಬಂಡವಾಳ ಎಷ್ಟು ? ಹಾಗೂ ವಿದೇಶಿ ಬಂಡವಾಳ ಎಷ್ಟು ?*

ಇ) *ಹಾಗಿದ್ದಲ್ಲಿ, ಈ ಬಗ್ಗೆ ದಕ್ಷಿಣ ಕನ್ನಡ ಜಿಲ್ಲೆ ಹಾಗೂ ಉಡುಪಿ ಜಿಲ್ಲೆಯಲ್ಲಿ ಯಾವ ಕಾರ್ಯಕ್ರಮ ಹಾಕಿಕೊಳ್ಳಲಾಗಿದೆ ?*

ಶ್ರೀ ಎಸ್.ಎಂ. ಕೃಷ್ಣ (ಮುಖ್ಯ ಮಂತ್ರಿ) :

ಅ) ಕರ್ನಾಟಕ ರಾಜ್ಯದಲ್ಲಿ ಮಾಹಿತಿ ತಂತ್ರಜ್ಞಾನವನ್ನು ಅಭಿವೃದ್ಧಿಗೊಳಿಸುವುದಕ್ಕಾಗಿ

ಸರ್ಕಾರವು ದಿನಾಂಕ 18.3.2000 ದಂದು 'ಮಾಹಿತಿ'-ದಿ ಮಿಲೆನಿಯಂ ಐಟಿ ಪಾಲಿಸಿಯನ್ನು ಘೋಷಣೆ ಮಾಡಿದೆ. ಈ ಪಾಲಿಸಿಯಲ್ಲಿ ತಿಳಿಸಿರುವ ಎಲ್ಲಾ ಕಾರ್ಯಕ್ರಮಗಳನ್ನು ಸರ್ಕಾರವು ಹಂತಹಂತವಾಗಿ ಅನುಷ್ಠಾನಕ್ಕೆ ತರುತ್ತಿದೆ.

ಆ) ರಾಜ್ಯದಲ್ಲಿ ಬೆಂಗಳೂರು, ಮೈಸೂರು ಮತ್ತು ಮಣಿಪಾಲಗಳಲ್ಲಿ ಈಗಾಗಲೇ ಭೂ ಕೇಂದ್ರ (Earth Station) ಗಳನ್ನು ಪ್ರಾರಂಭಿಸಲಾಗಿದ್ದು ಅವುಗಳು ಕಾರ್ಯ ನಿರ್ವಹಿಸುತ್ತಿವೆ. ಹುಬ್ಬಳ್ಳಿ ಮತ್ತು ಮಂಗಳೂರುಗಳಲ್ಲಿ ಭೂ ಕೇಂದ್ರಗಳ ಸ್ಥಾಪನೆಗೆ ಕ್ರಮಕೈಗೊಳ್ಳಲಾಗುತ್ತಿದೆ ಹುಬ್ಬಳ್ಳಿ ಭೂ ಕೇಂದ್ರ ಸ್ಥಾಪನೆಗೆ ಸಂಬಂಧಿಸಿದಂತೆ ಒಂದು ಕೋಟಿ ರೂಪಾಯಿಗಳನ್ನು ಸಾಫ್ಟ್‌ವೇರ್ ಟೆಕ್ನಾಲಜಿ ಪಾರ್ಕ್ ಆಫ್ ಇಂಡಿಯಾ ಇವರಿಗೆ ನೀಡಲಾಗಿದೆ. ಮಂಗಳೂರಿನಲ್ಲಿ ಭೂ ಕೇಂದ್ರ ಸ್ಥಾಪನೆಗೆ ಸಂಬಂಧಿಸಿದಂತೆಯೂ ಒಂದು ಕೋಟಿ ರೂಪಾಯಿಗಳನ್ನು ನೀಡಲು ಬದ್ಧವಾಗಿದೆ. ಆಪ್ಟಿಕ್ ಫೈಬರ್ ಕೇಬಲುಗಳನ್ನು ರಾಜ್ಯದ ಎಲ್ಲಾ ಭಾಗಗಳಲ್ಲಿಯೂ ಅಳವಡಿಸುವ ಕಾರ್ಯಕ್ರಮವನ್ನು ಖಾಸಗಿ ಕಂಪನಿಗಳು ನಿರ್ವಹಿಸುತ್ತಿದ್ದು ಈ ಕಂಪನಿಗಳಿಗೆ ಸರ್ಕಾರವು ಉಚಿತ 'ರೈಟ್ ಆಫ್ ವೇ' ಯನ್ನು ನೀಡುತ್ತಿದೆ. ಇದರಲ್ಲಿ ಸರಕಾರದ ಬಂಡವಾಳವೇನೂ ಇರುವುದಿಲ್ಲ. ವಿದೇಶಿ ಬಂಡವಾಳದ ನಿಖರ ಮಾಹಿತಿ ಇರುವುದಿಲ್ಲ.

ಇ) ಮಣಿಪಾಲದಲ್ಲಿ ಈಗಾಗಲೇ ಭೂ ಕೇಂದ್ರವು ಕಾರ್ಯ ನಿರ್ವಹಿಸುತ್ತಿದೆ. ಮಂಗಳೂರಿನಲ್ಲಿ ಮಾಹಿತಿ ತಂತ್ರಜ್ಞಾನ ಪಾರ್ಕ್ ಮತ್ತು ಭೂ ಕೇಂದ್ರ ಸ್ಥಾಪನೆಗೆ ಕ್ರಮಕೈಗೊಳ್ಳಲಾಗುತ್ತಿದೆ.

ಆಪ್ಟಿಕ್ ಫೈಬರ್ ಕೇಬಲುಗಳನ್ನು ಅಳವಡಿಸುವ ಬಗ್ಗೆ ಖಾಸಗಿ ಕಂಪನಿಗಳಿಗೆ ಉಚಿತ ರೈಟ್ ಆಫ್ ವೇ ನೀಡುವ ನೀತಿಯು ದಕ್ಷಿಣ ಕನ್ನಡ ಜಿಲ್ಲೆ ಮತ್ತು ಉಡುಪಿ ಜಿಲ್ಲೆಗಳಿಗೂ ಅನ್ವಯಿಸುತ್ತಿದೆ.

ಶ್ರೀ ಎನ್. ಯೋಗೀಶ್ ಭಟ್ : ಉಚಿತ "ರೈಟ್ ಆಫ್ ವೇ" ಎಂದರೇನು? ಮತ್ತು ಇದಕ್ಕೆ ಇರತಕ್ಕಂಥ ನಿಬಂದನೆಗಳೇನು? ಹಾಗೆಯೇ ಆಪ್ಟಿಕ್ ಫೈಬರ್ ಕೇಬಲ್‌ಗಳನ್ನು ಅಳವಡಿಸುವುದಕ್ಕಾಗಿ ಟೈ-ಬಾಂಡ್ ಕಾರ್ಯಕ್ರಮಗಳನ್ನು ಹಾಕಿಕೊಳ್ಳಲಾಗಿದೆಯೆ? ಮತ್ತೆ ಮಂಗಳೂರಿನಲ್ಲಿ ಭೂ ಕೇಂದ್ರವನ್ನು ನವೆಂಬರ್ ಒಂದರೊಂದು ಪ್ರಾರಂಭ ಮಾಡಲಾಗುತ್ತದೆ ಎನ್ನತಕ್ಕಂಥ ಅಶ್ವಾಸನೆಯನ್ನು ತಾವು ಕೊಟ್ಟಿದ್ದೀರಿ. ಆದರೆ ಅದು ಇನ್ನೂ ಪ್ರಾರಂಭವಾಗಿಲ್ಲ. ಆದರೆ ಇದಕ್ಕಾಗಿ ಒಂದು ಕೋಟಿ ರೂಪಾಯಿಗಳನ್ನು ನೀಡಿರುವುದಕ್ಕಾಗಿ ನಾನು ತಮಗೆ ಧನ್ಯವಾದಗಳನ್ನು ಹೇಳುತ್ತೇನೆ. ಈ ಸಂದರ್ಭದಲ್ಲಿ ಮಂಗಳೂರು ಭೂ ಕೇಂದ್ರವನ್ನು ಯಾವಾಗ ಆರಂಭ ಮಾಡಲಾಗುತ್ತದೆ ಎಂಬುದನ್ನು ಸ್ಪಷ್ಟಪಡಿಸಬೇಕು.

ಶ್ರೀ ಎಸ್.ಎಂ. ಕೃಷ್ಣ : ಮಾನ್ಯ ಅಧ್ಯಕ್ಷರೆ, ಮಂಗಳೂರಿಗೆ ಈಗಾಗಲೇ ಭೂ ಕೇಂದ್ರಕ್ಕಾಗಿ ಒಂದು ಕೋಟಿ ರೂಪಾಯಿಗಳನ್ನು ಕೊಡಲಾಗಿದೆ. ಈಗ ಸದರಿ ಕೆಲಸಗಳನ್ನು ನಡೆಯುತ್ತಿದ್ದು, ಇನ್ನು ಎರಡು ತಿಂಗಳೊಳಗಾಗಿ ಕಾರ್ಯಾರಂಭವಾಗಬಹುದು. ಇನ್ನು 'ರೈಟ್ ಆಫ್ ವೇ' ಬಗ್ಗೆ ಹೇಳುವುದಾದರೆ, ಇದಕ್ಕೆ ಯಾವುದೇ ರೀತಿಯ ನಿಬಂಧನೆಗಳಿರುವುದಿಲ್ಲ. ಈಗಾಗಲೇ ರಿಲೆಯನ್ಸ್ ಮತ್ತು ಬಿ.ಪಿ.ಎಲ್. ಸಂಸ್ಥೆಗಳು ಇಲ್ಲಿಗೆ ಬಂದು ಕೆಲಸಗಳನ್ನು ಪ್ರಾರಂಭ ಮಾಡಿದೆ. ಆದರೆ ಎನ್ರಾನ್ ಸಂಸ್ಥೆಗೆ ಸಂಸ್ಥೆಯವರಿಗೆ

ಪರವಾನಿಗೆ ಕೊಟ್ಟಿದ್ದೇವೆ. ಆದರೆ ಈ ಸಂಸ್ಥೆಯವರು ಇನ್ನು ಕೆಲಸವನ್ನು ಪ್ರಾರಂಭ ಮಾಡಿಲ್ಲ. ನಾನು ಈಗಾಗಲೇ ಹೇಳಿದಂಥ ರಿಲೆಯನ್ಸ್, ಬಿ.ಪಿ.ಎಲ್. ಸಂಸ್ಥೆಗಳು ಸದರಿ ಕೆಲಸವನ್ನು ಪ್ರಾರಂಭ ಮಾಡಿದ್ದಾರೆ.

ಶ್ರೀ ಎಸ್. ಯೋಗೀಶ್ ಭಟ್ : ಜಿಲ್ಲಾಡಳಿತ ಮತ್ತು ವಿಶೇಷವಾಗಿ ನಗರಮಟ್ಟದಲ್ಲಿ ಮಾತ್ರ ಮಾಹಿತಿ ತಂತ್ರಜ್ಞಾನಕ್ಕೆ ಸಂಬಂಧಪಟ್ಟಂಥ ಕಾರ್ಯ ಚಟುವಟಿಕೆಗಳು ನಡೆಯುತ್ತಿವೆ. ಆದ್ದರಿಂದ ಗ್ರಾಮಾಂತರ ಮಟ್ಟದಲ್ಲಿ ಮತ್ತು ತಾಲ್ಲೂಕು, ನಗರ ಹಾಗೂ ಜಿಲ್ಲಾಡಳಿತ ಮತ್ತು ಸ್ಥಳೀಯ ಅಡಳಿತ ಹಾಗೂ ಎಲ್ಲಾ ಅಡಳಿತ ರಂಗದಲ್ಲಿ ಕಂಪ್ಯೂಟರೀಕರಣ ಮಾಡಲಿಕ್ಕೆ ಸರ್ಕಾರ ಏನು ಕಾರ್ಯಕ್ರಮ ಹಮ್ಮಿಕೊಂಡಿದೆ? ಹಾಗೆಯೇ ಇಂಗ್ಲೀಷ್ ಭಾಷೆಯಲ್ಲಿರತಕ್ಕಂಥ ಮಾಹಿತಿಯನ್ನು ಕನ್ನಡ ಭಾಷೆಯಲ್ಲಿ ತರ್ಜುಮೆ ಮಾಡತಕ್ಕಂಥ ನಿಟ್ಟಿನಲ್ಲಿ ಮಾಹಿತಿ ತಂತ್ರಜ್ಞಾನಕ್ಕೆ ಸಂಬಂಧಪಟ್ಟಂತೆ ಏನಾದರೂ ಕಾರ್ಯಕ್ರಮಗಳನ್ನು ಹಾಕಿಕೊಳ್ಳಲಾಗಿದೆಯೆ?

ಶ್ರೀ ಎಸ್.ಎಂ. ಕೃಷ್ಣ : ಇಂಗ್ಲೀಷ್ ಭಾಷೆಯಲ್ಲಿರತಕ್ಕಂಥ ಬಾಹ್ಯ ತಾಂತ್ರಿಕತೆಯ ಬಗ್ಗೆ ಪರಿಚಯ ಮಾಡಿಕೊಡಬೇಕೆಂಬ ದೃಷ್ಟಿಯಿಂದ ಸಾವಿರ ಸರ್ಕಾರಿ ಶಾಲೆಗಳಲ್ಲಿ ಕಂಪ್ಯೂಟರ್ ಶಿಕ್ಷಣವನ್ನು ಕೊಡಬೇಕು ಎನ್ನತಕ್ಕಂಥ ಅರ್ಥವಾದ ನೀತಿಯನ್ನು ಜಾರಿಗೆ ತರುತ್ತಿದ್ದೇವೆ. ಇದರ ಜೊತೆಯಲ್ಲಿ ರಾಜ್ಯದಾಂತ್ಯ 225 ಕಡೆ ಅಂದರೆ ಪ್ರತಿಯೊಂದು ವಿಧಾನಸಭಾ ಕ್ಷೇತ್ರದಲ್ಲಿ ಒಂದೊಂದು "ಯುವ ಡಾಟ್ ಕಾಮ್" ತೆಗೆಯುವುದರ ಮೂಲಕ ತಾಲ್ಲೂಕು ಕ್ಷೇತ್ರದಲ್ಲಿ ಹೆಚ್ಚು ಜನರಿಗೆ ಇದರ ಪರಿಚಯ ಮಾಡಿಸಿಕೊಡಲಾಗುತ್ತದೆ. ಗ್ರಾಮಂತರ ಮತ್ತು ಪಟ್ಟಣಗಳ ನಡುವೆ ಡಿಜಿಟಲ್ ಡಿವೈಸ್ ಅನ್ನು ತಂದು ಗ್ರಾಮಾಂತರ ಮತ್ತು ಪಟ್ಟಣಗಳ ನಡುವಿನ ಅಂತರವನ್ನು ಹತ್ತಿರ ತರಬೇಕೆಂಬುದು ನಮ್ಮ ಉದ್ದೇಶವಾಗಿದೆ. ಇದರ ಜೊತೆಗೆ ಕಾಲೇಜು ವಿದ್ಯಾರ್ಥಿಗಳಿಗೆ ಮಾಹಿತಿ ತಂತ್ರಜ್ಞಾನದ ನೈಪುಣ್ಯತೆ ಹೆಚ್ಚಿಸಲು 100 ತಾಂತ್ರಿಕ ಕಾಲೇಜುಗಳಲ್ಲಿ ಮತ್ತು 150 ಐಟಿಐ ಗಳಲ್ಲಿ ತರಬೇತಿ ಕೇಂದ್ರಗಳನ್ನು ಮತ್ತು 200 ಖಾಸಗಿ ಕಾಲೇಜುಗಳಲ್ಲಿ ತರಬೇತಿ ಕೇಂದ್ರಗಳನ್ನು ಮತ್ತು ಪ್ರಯೋಗ ಶಾಲೆಗಳನ್ನು ತೆರೆಯುವುದಕ್ಕೆ ಯೋಜನೆಗಳನ್ನು ಈಗಾಗಲೇ ಕೈಗೆ ಎತ್ತಿಕೊಂಡಿದ್ದೇವೆ. ನಾನು ಈಗಾಗಲೇ ಹೇಳಿದಂಥ ಸಾವಿರ ಸರ್ಕಾರಿ ಶಾಲೆಗಳಲ್ಲಿ ಕಂಪ್ಯೂಟರ್ ಶಿಕ್ಷಣ ಕೊಡುವುದರ ಬಗ್ಗೆ ಮೊನ್ನೆ ದಿವಸ ನಡೆದಂಥ ಕ್ಯಾಬಿನೆಟ್ ಸಭೆಯಲ್ಲಿ ಮಂಜೂರು ಆಗಿದೆ. ಶ್ರೀ ಬಿಲ್‌ಗೇಟ್ಸ್‌ರವರು 'ವಿಡೋಸ್ 2000' ಅನ್ನು ಜಾರಿಗೆ ತರುತ್ತಿದ್ದಾರೆ. ಆದರಲ್ಲಿ ಕನ್ನಡ ಕೀಲಿಮಣೆಯನ್ನು ಕೂಡ ಸೇರಿಸಬೇಕೆಂದು ದೆಹಲಿಯಲ್ಲಿ ನಾನು ಬಿಲ್‌ಗೇಟ್ಸ್ ರವರನ್ನು ಛೇಟಿ ಮಾಡಿ ಈ ಸಲಹೆಯನ್ನು ಕೊಟ್ಟಾಗ, ಅವರು ಈ ಸಲಹೆಗೆ ತುಂಬು ಮನಸ್ಸಿನಿಂದ ಸ್ಪಂದಿಸಿದರು. ಲೋಕಲ್ ಇನಿಷಿಯೇಟಿವ್ ಮತ್ತು ಟ್ಯಾಲೆಂಟ್‌ಗೆ ಬೇಕಾಗಿರತಕ್ಕಂಥ ಎಲ್ಲಾ ಮಾಹಿತಿಗಳನ್ನು ಕೂಡ ಮೈಕ್ರೋ ಸಾಫ್ಟ್‌ವೇರ್‌ಗೋಸ್ಕರ ಅವರಿಗೆ ಈಗಾಗಲೇ ಒದಗಿಸಿ ಕೊಟ್ಟಿದ್ದೇವೆ. ಖಾಸಗಿ ಕ್ಷೇತ್ರದಲ್ಲಿ ಕಂಪ್ಯೂಟರ್ ಇಲ್ಲದೇ ಯಾವ ರೀತಿಯಾಗಿ ಈ-ಮೇಲ್‌ಗಳನ್ನು ಕಳುಹಿಸಬಹುದಕ್ಕೆ ಒಂದು ಸಣ್ಣ ಉಪಕರಣವನ್ನು ನಿನ್ನೆ ದಿವಸ ಬಿಡುಗಡೆ ಮಾಡಿದ್ದಾರೆ. ಈ ಕಮರ್ಷಿಯಲ್ ಪ್ರೊಡಕ್ಷನ್‌ನನ್ನು ಗ್ರಾಮಾಂತರ ಪ್ರದೇಶಗಳಲ್ಲಿ ಡಿಸೆಂಬರ್ ತಿಂಗಳಿಂದ ಪ್ರಾರಂಭ ಮಾಡಲಾಗುವುದು. ತಿಂಗಳಿಗೆ 50 ರೂಪಾಯಿ ಕೊಟ್ಟರೆ ಎಷ್ಟು ಬೇಕಾದರೂ ಈ-ಮೇಲ್ ಕಳುಹಿಸತಕ್ಕಂಥ ಸೌಲಭ್ಯಗಳನ್ನು ಮಾಡುವುದಕ್ಕಾಗಿ ವಿಶೇಷವಾದಂಥ ಇನಿಷಿಯೇಟಿವ್ ತೆಗೆದುಕೊಂಡಿದ್ದೇವೆ. ಇವತ್ತಿನದಿವಸ ಟೆಲಿಫೋನ್ ಸಂಪರ್ಕ ಸಾಧನವನ್ನು ಎಷ್ಟು ಅತ್ಯವಶ್ಯಕವಾಗಿದೆಯೋ

ಅದೇ ರೀತಿ ಗ್ರಾಮಂತರ ಪ್ರದೇಶದಲ್ಲಿ ಈ ರೀತಿಯಾದ ಈ-ಮೇಲ್ ಆಕ್ಸೆಸಿಬಿಲಿಟಿ ಜಾಸ್ತಿ ಆಗುವುದಕ್ಕೆ ಸಹಾಯವಾಗುತ್ತದೆ.

1.40 ಪಿ.ಎಂ

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ಮಂಗಳೂರು ಮತ್ತು ಹುಬ್ಬಳ್ಳಿಯಲ್ಲಿ ಸಾಫ್ಟ್‌ವೇರ್ ಟೆಕ್ನಾಲಜಿಯನ್ನು ಸ್ಥಾಪನೆ ಮಾಡುವುದಾಗಿ ಉತ್ತರವನ್ನು ಕೊಟ್ಟಿದ್ದರು. ಹುಬ್ಬಳ್ಳಿಯಲ್ಲಿ ಈ ಸಾಫ್ಟ್‌ವೇರ್ ಟೆಕ್ನಾಲಜಿಯನ್ನು ನವೆಂಬರ್ ಒಂದನೇ ತಾರೀಖಿಗೆ ಪ್ರಾರಂಭ ಮಾಡುವುದಾಗಿ ಹೇಳಿದ್ದರು, ಅದಕ್ಕಿಂತ ಮೊದಲು ಆಗಸ್ಟ್ ಒಂದನೇ ತಾರೀಖಿಗೆ ಇನಾಗ್ಯುರೇಶನ್ ಮಾಡುತ್ತೇವೆಂದು ಹೇಳಿದರು. ಈಗ ಆಗಸ್ಟ್ ತಿಂಗಳು ಹೋಗಿ ನವೆಂಬರ್ ತಿಂಗಳು ಬಂದಿರುತ್ತದೆ, ಇನ್ನುವರೆಗೆ ಅದು ಪ್ರಾರಂಭವಾಗುವ ಯಾವ ಸೂಚನೆಯು ಕಂಡು ಬಂದಿರುವುದಿಲ್ಲ. ಅದೇ ರೀತಿಯಲ್ಲಿ ಬೆಂಗಳೂರಿನಲ್ಲಿ ಆದಹಾಗೆ ಉತ್ತರ ಕರ್ನಾಟಕದ ಹುಬ್ಬಳ್ಳಿಯಲ್ಲಿ ಕೂಡ ಈ ಸಾಫ್ಟ್‌ವೇರ್ ಟೆಕ್ನಾಲಜಿ ಬರಲಿ ಎನ್ನುವುದು ಆ ಭಾಗದ ಎಲ್ಲ ಜನರ ಕೂಗು ಇದೆ, ಇದರ ಬಗ್ಗೆ ತಾವು ತಮ್ಮ ಅಭಿಪ್ರಾಯವನ್ನು ಹೇಳಬೇಕು. ನಮಗೆ ಒಂದು ಸ್ಪಷ್ಟವಾದ ದಿನಾಂಕವನ್ನು ಕೊಡಬೇಕು. ಈಗ ಮತ್ತೊಂದು ಟೆಕ್ನಾಲಜಿಗೆ ಅನುಮತಿ ಕೊಟ್ಟಂಥಾದ್ದನ್ನು ನಾವು ನೋಡಿರುತ್ತೇವೆ, ಇದರ ಬಗ್ಗೆ ನಾವು ಹೆಚ್ಚಿಗೆ ಡಿಸ್‌ಕಸ್ ಮಾಡುವುದು ಬೇಡ, ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಸ್ಪಷ್ಟಪಡಿಸಬೇಕೆಂದು ನಾನು ಕೇಳಿ ಕೊಳ್ಳುತ್ತೇನೆ.

ಶ್ರೀ ಎಸ್.ಎಂ. ಕೃಷ್ಣ : ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋಧಪಕ್ಷದ ನಾಯಕರಿಗೆ ಈ ವಿಚಾರ ಗೊತ್ತಿದೆ, ಹುಬ್ಬಳ್ಳಿಯಲ್ಲಿ ಕಾರ್ಪೊರೇಷನ್‌ನವರು ಒಂದು ಬಿಲ್ಡಿಂಗನ್ನು ಕಟ್ಟಿಸಿದರು, ಆದರೆ ಆ ಬಿಲ್ಡಿಂಗನ್ನು ಪೂರ್ತಿ ಮಾಡುವುದಕ್ಕಾಗಲಿಲ್ಲ. ರಾಜ್ಯ ಸರ್ಕಾರದವರು ಆ ಬಿಲ್ಡಿಂಗಿಗೆ ಸೆಕ್ಯೂರಿಟಿಯನ್ನು ಕೊಟ್ಟಿದ್ದಾರೆ ಈಗ ಆ ಬಿಲ್ಡಿಂಗನ್ನು ಇನ್‌ಫರ್‌ಮೇಷನ್ ಟೆಕ್ನಾಲಜಿಯವರು ತೆಗೆದುಕೊಂಡಿದ್ದಾರೆ. ಅಲ್ಲಿ ಒಂದು ಟೆಕ್ನಾಲಜಿ ಪಾರ್ಕ್ ಮಾಡಬೇಕೆಂದು ರಾಜ್ಯ ಸರ್ಕಾರ ತೀರ್ಮಾನವನ್ನು ತೆಗೆದುಕೊಂಡಿರುತ್ತದೆ. ಅದಕ್ಕೆ ಇನ್ನು 7 ಕೋಟಿ ರೂಪಾಯಿಗಳು ಬೇಕಾಗುತ್ತದೆ, ಆ 7 ಕೋಟಿ ರೂಪಾಯಿಗಳನ್ನು ಕೊಡುವುದಾಗಿ ಸಚಿವ ಸಂಪುಟ ಒಪ್ಪಿರುತ್ತದೆ. ಆದರೆ ನಮ್ಮ ಮುಂದೆ ಬಂದಿರುವ ಒಂದು ಅಡಚಣೆ ಏನೆಂದರೆ, ಈ 7 ಕೋಟಿ ರೂಪಾಯಿಗಳನ್ನು ಕೊಟ್ಟು ತತ್‌ಕ್ಷಣದಲ್ಲಿ ಯಾವುದಾದರೊಂದು ಎಜೆನ್ಸಿಗೆ ವಹಿಸಿ ಈ ಕೆಲಸವನ್ನು ಮಾಡಿ ಎಂದು ಹೇಳಿಬಿಡಬಹುದಾಗಿತ್ತು. ನಾವು ಇತ್ತೀಚೆಗೆ ಹೊರಡಿಸಿರುವ ಟ್ರಾನ್ಸ್‌ಫರೆನ್ಸಿ ಮತ್ತು ಟೆಂಡರ್‌ಗಳ ಕಟ್ಟುಪಾಡಿಗೆ ಬದ್ಧರಾಗಿ ನಾವು ಈ ತೀರ್ಮಾನವನ್ನು ಮಾಡಿದ್ದು, ಆದರೆ ಪ್ರಪೋಜಲ್ ಇದ್ದದ್ದು ಎಲ್ ಅಂಡ್ ಟಿ ಯವರಿಗೆ ಕೊಡಬೇಕೆಂದು, ಏಕೆಂದರೆ ಎಲ್ ಅಂಡ್ ಟಿ-ಯವರು ನಮ್ಮ ಬೆಂಗಳೂರು ಟೆಕ್ನಾಲಜಿ ಪಾರ್ಕ್‌ನ್ನು ಕಟ್ಟಿದ್ದಾರೆ. ಚೆನ್ನೈನಲ್ಲಿ ಕೂಡ ಟೆಕ್ನಾಲಜಿ ಪಾರ್ಕನ್ನು ಕಟ್ಟಿದ್ದಾರೆ. ಹೈದ್ರಾಬಾದ್‌ನಲ್ಲಿ ಸಹ ಟೆಕ್ನಾಲಜಿ ಪಾರ್ಕನ್ನು ಅವರೇ ಕಟ್ಟಿದ್ದಾರೆ, ಈ ಅಧಾರದ ಮೇಲೆ ನಾವು ಅವರಿಗೆ ಕಣ್ಣುಮುಚ್ಚಿಕೊಂಡು ಕೊಡಬಹುದಾಗಿತ್ತು, ಅದರೂ ಕೂಡ ನಾವು ಇದರ ಬಗ್ಗೆ ಸಂಬಂಧಪಟ್ಟ ಇಲಾಖೆಗೆ ತಿಳಿಸಿದ್ದೇವೆ, ಇದರ ಬಗ್ಗೆ ನೀವು ಫ್ರೀ ಕ್ವಾಲಿಫೈ ಮಾಡಿ, ಟೆಂಡರನ್ನು ಕರೆದು, ಅನಂತರ ಈ ಕೆಲಸವನ್ನು ಯಾರು ಸಮರ್ಥವಾಗಿ ನಿರ್ವಹಿಸುತ್ತಾರೆಂದು ನಿಮಗೆ ಅಭಿಪ್ರಾಯ ಬರುತ್ತದೋ ಅವರಿಗೆ ಇದನ್ನು ವಹಿಸಬೇಕೆಂದು ಹೇಳಿದ್ದೇವೆ. ಇದು ಆದಷ್ಟು ಬೇಗ ಕಾರ್ಯರೂಪಕ್ಕೆ ಬರುತ್ತದೆ ಎನ್ನುವುದಕ್ಕೆ ನಾವು ಕೆಲವೊಂದು ಪೂರಕ ಕಾರ್ಯಕ್ರಮಗಳನ್ನು ತೆಗೆದುಕೊಂಡಿರುತ್ತೇವೆ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ಆಗಸ್ಟ್ ತಿಂಗಳಲ್ಲಿ ಹುಬ್ಬಳ್ಳಿಯಲ್ಲಿ ಟೆಕ್ನಾಲಜಿಯನ್ನು ಪ್ರಾರಂಭ ಮಾಡುವುದಾಗಿ ದಿನಾಂಕವನ್ನು ಅನೌನ್ಸ್ ಮಾಡಿದ್ದೀರಿ, ಅದಕ್ಕಾಗಿ ನಾನು ಕೇಳುತ್ತಿದ್ದೇನೆಯೇ ಹೊರತು ಬೇರೆನಿಲ್ಲ. ಈಗ ಆಗುತ್ತದೆಂದು ನಿಮ್ಮ ಅಧಿಕಾರಿಗಳು ನಿಮಗೆ ಸ್ಪಷ್ಟವಾಗಿ ಮಾಹಿತಿಯನ್ನು ಕೊಟ್ಟಿರಬಹುದು. ನೀವು ಅನೌನ್ಸ್ ಮಾಡದಿದ್ದರೆ ಅದು ಬೇರೆ ವಿಷಯ, ಆಗಸ್ಟ್ ತಿಂಗಳಲ್ಲಿ ನೀವು ಪ್ರಾರಂಭೋತ್ಸವ ಮಾಡುತ್ತೇವೆಂದು ಹೇಳಿದ್ದೀರಿ. ಇನ್ನು ಎರಡು ಅಥವಾ ಮೂರು ತಿಂಗಳು ಬೇಕಾದರೆ ನೀವು ಸಮಯವನ್ನು ತೆಗೆದುಕೊಳ್ಳಿ, ಆದರೆ ಯಾವ ತಿಂಗಳಲ್ಲಿ ಮಾಡುತ್ತೀರಿ ಎನ್ನುವ ಬಗ್ಗೆ ಒಂದು ಸ್ಪಷ್ಟತೆ ಇರಲಿ ಎನ್ನುವುದು ನನ್ನ ಭಾವನೆಯಾಗಿರುತ್ತದೆ.

ಶ್ರೀ ಎಸ್.ಎಂ. ಕೃಷ್ಣ : ಮಾನ್ಯ ಅಧ್ಯಕ್ಷರೆ, ನಾನು ಈಗಾಗಲೇ ಹೇಳಿದಂತೆ ಸರ್ಕಾರ ಟೆಂಡರ್ ಕರೆಯಬೇಕು, ನಂತರ ಅದನ್ನು ಒಂದು ಏಜನ್ಸಿಗೆ ವಹಿಸಿಕೊಡಬೇಕು, ಅನಂತರ ಅವರು ಕೆಲಸವನ್ನು ಪ್ರಾರಂಭ ಮಾಡಬೇಕು. ಇವು ಯಾವುದೇ ಸಮಸ್ಯೆಗಳು ಇಲ್ಲದಿದ್ದರೆ ನಾನು ದಿನಾಂಕವನ್ನು ಅನೌನ್ಸ್ ಮಾಡಿಬಿಡುತ್ತಿದ್ದೆವು. ಎಲ್ ಅಂಡ್ ಟಿ ಯವರಿಗೆ ಕೊಡುತ್ತೇವೆ, ಅವರು ಈ ಕೆಲಸವನ್ನು ಮುಗಿಸುತ್ತಾರೆ, ಆದರೆ ನಾನು ಇವತ್ತು ಆಶ್ವಾಸನೆ ಕೊಡುವ ಸ್ಥಿತಿಯಲ್ಲಿರುವುದಿಲ್ಲ. ಮಾನ್ಯ ವಿರೋಧಪಕ್ಷದ ನಾಯಕರು ಕೇಳಿದ ಮೇಲೆ ಒಂದು ದಿನಾಂಕವನ್ನು ನಾನು ಹೇಳಲೇಬೇಕಾಗುತ್ತದೆ. ಇದು ಮೊದಲನೇ ನವೆಂಬರ್ ಬರುತ್ತಿದೆ, ತಾವು ನನಗೆ ಇನ್ನು ಮೂರು ತಿಂಗಳು ಕಾಲಾವಕಾಶವನ್ನು ಕೊಡಿ, ಆ ಮೂರು ತಿಂಗಳಲ್ಲಿ ನಾವು ಮಾಡಿ ಮುಗಿಸುತ್ತೇವೆ.

ಶ್ರೀ ಯು.ಆರ್. ಸಭಾಪತಿ (ಉಡುಪಿ) : ಮಾನ್ಯ ಅಧ್ಯಕ್ಷರೆ, ಆಡಳಿತದಲ್ಲಿ ಮಾಹಿತಿ ತಂತ್ರಜ್ಞಾನವನ್ನು ಅಳವಡಿಸುವುದು ಮುಖ್ಯವಾಗಿರುತ್ತದೆ. ಇವತ್ತು ಇಲಾಖೆಯ ಅಧಿಕಾರಿಗಳು ಕಛೇರಿಯಲ್ಲಿ ಹಾಗೂ ಮಾನ್ಯ ಮಂತ್ರಿಗಳ ಕಛೇರಿಗಳಲ್ಲಿಯೂ ಯಾವ ರೀತಿಯಾದ ಸಾಫ್ಟ್‌ವೇರನ್ನು ಬಿಲ್ಡ್-ಅಪ್ ಮಾಡಲಾಗಿದೆ? ಇಲಾಖೆಯ ಕಾರ್ಯದರ್ಶಿಗಳನ್ನು ಕಛೇರಿಯಲ್ಲೂ ಸಹ ಕಂಪ್ಯೂಟರೀಕರಣಗೊಳಿಸಲಿಕ್ಕೆ ಯಾವಾಗ ಪ್ರಾರಂಭ ಮಾಡುತ್ತೀರಿ ಎನ್ನುವ ಪ್ರಶ್ನೆಯನ್ನು ನಾನು ಕೇಳುತ್ತಿದ್ದೇನೆ.

ಶ್ರೀ ಎಸ್.ಎಂ. ಕೃಷ್ಣ : ಎಲ್ಲಾ ಇಲಾಖಾ ಕಾರ್ಯದರ್ಶಿಗಳು ಕೂಡ ಮಾಹಿತಿ ತಂತ್ರಜ್ಞಾನದಲ್ಲಿ ಹೆಚ್ಚಿನ ಪರಿಣತಿಯನ್ನು ಪಡೆಯಬೇಕು ಎನ್ನುವುದು ಸರ್ಕಾರದ ಉದ್ದೇಶವಾಗಿದೆ. ಮಾನ್ಯ ಯು.ಆರ್. ಸಭಾಪತಿಯವರು ಈ ವಿಚಾರದಲ್ಲಿ ಬಹಳ ಮುಂದೆ ಹೋಗಿಬಿಟ್ಟಿರುತ್ತಾರೆ. ನಮ್ಮ ಇಲಾಖಾ ಕಾರ್ಯದರ್ಶಿಗಳು ಅವರನ್ನು ಹಿಂಬಾಲಿಸಬೇಕು ಎನ್ನುವುದು ನಮ್ಮ ಅಪೇಕ್ಷೆ, ಇದನ್ನು ಮಾನ್ಯ ಸದಸ್ಯರು ಅರ್ಥಮಾಡಿಕೊಳ್ಳುತ್ತಾರೆಂದು ನನ್ನ ಭಾವನೆಯಾಗಿದೆ.

ಆರಾಧನಾ ಯೋಜನೆಯಲ್ಲಿ ದೊಡ್ಡಬಳ್ಳಾಪುರ ತಾಲ್ಲೂಕಿನ ಗ್ರಾಮಗಳ ದೇವಸ್ಥಾನಗಳಿಗೆ ನೀಡಿದ ಧನ ಸಹಾಯ

452 - ಶ್ರೀ ಕೃಷ್ಣಪ್ಪ .ವಿ (ದೊಡ್ಡಬಳ್ಳಾಪುರ) : ಮಾನ್ಯ ಮುಜಾರಾಯಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯಪಿಟ್ಟು ಉತ್ತರಿಸುವರೆ?

1. 1993-94 ನೇ ಸಾಲಿನಿಂದ 1999-2000 ನೇ ಸಾಲಿನವರೆಗೆ ದೊಡ್ಡಬಳ್ಳಾಪುರ